ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ: ಕಾಶಿಇ/212/ಸಪ್ರಾನೇಬ/2016-17/ನೇವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಶೇಷಾದ್ರಿರಸ್ತೆ, ಬೆಂಗಳೂರು
ದಿನಾಂಕ: 05.08.2017

## ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸರ್ಕಾರಿ ಪದವಿ ಕಾಲೇಜುಗಳಿಗೆ ಸಹಾಯಕ ಪ್ರಾಧ್ಯಾಪಕರಾಗಿ ಆಯ್ಕೆಯಾಗಿರುವ ಅಭ್ಯರ್ಥಿಗಳಿಗೆ ಸೂಚನೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಕಾಲೇಜು ಶಿಕ್ಷಣ ಇಲಾಖೆಯ ಸರ್ಕಾರಿ ಪದವಿ ಕಾಲೇಜುಗಳಿಗೆ 2034 ಸಹಾಯಕ ಪ್ರಾಧ್ಯಾಪಕರನ್ನು ಆಯ್ಕೆ ಮಾಡಿದೆ. ಸದರಿ ಆಯ್ಕೆ ಪಟ್ಟಿಯಲ್ಲಿದ್ದ ಅಭ್ಯರ್ಥಿಗಳ ಪೋಲೀಸ್ ವರದಿ, ದೇಹಧಾರ್ಢ್ಯತೆ ಪ್ರಮಾಣ ಪತ್ರ, ಸಿಂಧುತ್ವ ಪ್ರಮಾಣ ಪತ್ರ, ಮೀಸಲಾತಿ, ಚಾರಿತ್ರ್ಯ ಪ್ರಮಾಣ ಪತ್ರ ಹಾಗೂ ಅಭ್ಯರ್ಥಿಗಳ ಮೂಲ ಅಂಕಪಟ್ಟಿ/ ಶೈಕ್ಷಣಿಕ ಪ್ರಮಾಣ ಪತ್ರಗಳ ನೈಜತೆಯನ್ನು ಪರಿಶೀಲಿಸಿದೆ. ಪರಿಶೀಲನೆಯ ನಂತರ ಪ್ರಕಟಿಸಲಾಧ ಪಟ್ಟಿ ಯಲ್ಲಿರುವವರಿಗೆ ದಿನಾಂಕ 7 ಆಗಸ್ಟ್ 2017ರ ನಂತರ ಕೌನ್ಸಿಲಿಂಗ್ ನಡೆಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ ಮಧ್ಯೆ ಆಯ್ಕೆ ಆಗಿರುವ ಕೆಲ ಅಭ್ಯರ್ಥಿಗಳು ದಿನಾಂಕ 17 -7 2017, 18-7-2017 ಹಾಗೂ 19-07-2017 ರಂದು ಕಾಲೇಜು ಶಿಕ್ಷಣ ಇಲಾಖೆಯ ಕಛೇರಿ ಬಳಿ ಗುಂಪುಗೂಡಿ ದಾಂದಲೆ ನಡೆಸಿದ್ದಾರೆ.ಈ ರೀತಿಯ ಅಕ್ರಮ ಸಭೆ ನಡೆಸುವುದು- ಕಾಲೇಜು ಶಿಕ್ಷಣ ಇಲಾಖೆಯ ಕಛೇರಿ ಬಳಿ ಗುಂಪುಗೂಡಿ ಇಲಾಖೆಯ ದಿನನಿತ್ಯದ ಕಾರ್ಯಗಳಲ್ಲಿ ಅಡ್ಡಿಉಂಟು ಮಾಡುವುದು ಕಾನೂನುಬಾಹಿರವಾಗಿದೆ. ದಿನಾಂಕ 17 -7 2017, 18-7-2017 ಹಾಗೂ 19-07-2017ರಂದು ಕೇಂದ್ರ ಕಛೇರಿ ಬಳಿ ಈ ರೀತಿ ದಾಂಧಲೆ ಮಾಡಿದವರ ಮಾಹಿತಿ ಇಲಾಖೆಯಲ್ಲಿದೆ.

ಈ ರಿತಿಯ ನಡೆವಳಿಕೆಗಳು ಕರ್ನಾಟಕ ನಾಗರೀಕ ಸೇವಾ (ಸಾಮನ್ಯ ನೇಮಕಾತಿ) ನಿಯಮ 1977 ನ್ನು ಉಲ್ಲಂಘಿಸಲಾಗಿದೆ. ಕರ್ನಾಟಕ ನಾಗರೀಕ ಸೇವಾ ನಿಯಮಗಳು 1977 ರ ನಿಯಮ 5 (3) ಪ್ರಕಾರ
**No person who attempts to obtain extraneous support by any means for his candidature from officials or non officials , shall be eligible for appointment to a state civil service.**

ದಿನಾಂಕ 7 ಆಗಸ್ಟ್ 2017 ರ ನಂತರ ಆಯ್ಕೆ ಆದ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ನಡೆಯಲಿದೆ. ಅಭ್ಯರ್ಥಿಗಳು ಕೌನ್ಸಿಲಿಂಗ್ ಸ್ಥಳದಲ್ಲಿ ಸಂಯಮ ಹಾಗು ಶಿಸ್ತಿನಿಂದ ವರ್ತಿಸಲು ಸೂಚಿಸಿದೆ. ಈ ಸಂದರ್ಭದಲ್ಲಿ ಯವುದೆ ರೀತಿಯ ಗುಂಪುಗೂಡುವಿಕೆ ಮತ್ತು ದಾಂಧಲೆ ಮಾಡಿದರೆ ಮೇಲ್ಕಾಣಿಸಿದ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1977 ರ ಪ್ರಕಾರ ಶಿಸ್ತು ಕ್ರಮ ಕೈಗೊಳ್ಳಲಾಗುವುದು ಹಾಗು ಸರಕಾರಿ ಹುದ್ದೆಗೆ ಅನರ್ಹಗೊಳಿಸಲಾಗುವುದು.

ಆಯುಕ್ತರು
ಕಾಲೇಜು ಶಿಕ್ಷಣ ಇಲಾಖೆ